ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ1783/2013

ಚಾಸಾಃ15 ಪ್ರಾಸಾಃ11

ದಿನಾಂಕಃ 26-09-2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ದಿನೇಶ್ ಪೂಜಾರಿ |
| ತಂದೆಯ ಹೆಸರು | : | ಶೀನ ಪೂಜಾರಿ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಸೊಸೈಟಿಯಲ್ಲಿ ಮ್ಯಾನೇಜರ್ |
| ವಾಸ ಸ್ಥಳ | : | ಬಾರ್ಕೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು ಮೂರ್ತೆದಾರ ಸೇವಾ ಸಹಕಾರಿ ಸಂಘ ಸಾಸ್ತಾನ ಶಾಖೆಯಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ17-12-2012 ರಂದು ಪ್ರಹ್ಲಾದ್ ಪೂಜಾರಿಯವರು ನಮ್ಮ ಸಂಘಕ್ಕೆ ಬಂದು ತಾಯಿ ಕೊಟ್ಟ ಚಿನ್ನ ಎಂದು ಹೇಳಿ ಅಡ ಇಟ್ಟು 10,000/- ಸಾಲ ಪಡೆದುಕೊಂಡಿರುತ್ತಾರೆ. ದಿಃ 19-12-2012 ರಂದು ಪ್ರಹ್ಲಾದ್ ಪೂಜಾರಿ ಮತ್ತೆ ಬಂದು ಅದೇ ಚಿನ್ನದ ಮೇಲೆ 20,500/- ಸಾಲ ಪಡೆದಿರುತ್ತಾರೆ. ದಿಃ 26-12-2012 ರಂದು ಮತ್ತೆ ಬಂದು ಅದೇ ಚಿನ್ನದ ಮೇಲೆ 26,000/- ಸಾಲ ಪಡೆದಿರುತ್ತಾರೆ. ಪ್ರಹ್ಲಾದ್ ಪೂಜಾರಿಯವರ ತಾಯಿ ಚಿನ್ನ ಕಳುವು ಆಗಿರುವುದಾಗಿ ದೂರು ಕೊಟ್ಟ ನಂತರ ನಮಗೆ ಅದು ಕಳುವಿನ ಮಾಲು ಎಂದು ಗೊತ್ತಾಗಿರುತ್ತದೆ. ಸಾಲದ ಬಾಬ್ತು ನಮ್ಮ ಸೊಸೈಟಿಗೆ ಯಾವುದೇ ಹಣ ಬಂದಿರುವುದಿಲ್ಲ.

ದಿಃ 04-12-2012 ರಂದು ಅಭಿಷೇಕ್ ಶೆಟ್ಟಿಗಾರ್ ರವರು ಬಂದು ತಾಯಿಗೆ ಹುಷಾರು ಇಲ್ಲವೆಂದು ಲಕ್ಷ್ಮೀ ಪದಕವನ್ನು ನಮ್ಮ ಸಂಘದಲ್ಲಿ ಅಡವಿಟ್ಟು 16,000/- ಸಾಲ ಪಡೆದಿರುತ್ತಾರೆ. ಅದರ ಬಾಬ್ತು ಅವರ ಮನೆಯವರು ಹಣವನ್ನು ನಮಗೆ ಕೊಟ್ಟಿರುತ್ತಾರೆ. ನಂತರ ಪೊಲೀಸರು ಪ್ರಹ್ಲಾದ್ ಪೂಜಾರಿ ಮತ್ತು ಅಭಿಷೇಕ್ ಶೆಟ್ಟಿಗಾರ್ ರವರನ್ನು ನಮ್ಮ ಸಂಘಕ್ಕೆ ಕರೆದುಕೊಂಡು ಬಂದು ಕೋಟೇಶ್ವರದ ಜಾತ್ರೆಯಲ್ಲಿ ಯಾವುದೋ ಮಹಿಳೆಯ ಕುತ್ತಿಗೆಯಿಂದ ಸರ ಕದ್ದಿರುವುದಾಗಿ ಹೇಳಿದ ನಂತರ ನಮಗೆ ಗೊತ್ತಾಗಿರುತ್ತದೆ. ನಮ್ಮ ಬಳಿ

ಲಕ್ಷ್ಮೀ ಪದಕ ಮಾತ್ರ ಅಡವು ಇಟ್ಟಿದ್ದರು. ನಂತರ ಪೊಲೀಸರು ನಮ್ಮ ಸೊಸೈಟಿಯಲ್ಲಿ ಒಂದು ಪದಕ ಮತ್ತು ರೋಪ್ ಚೈನ್‌ನ್ನು ತೂಕ ಮಾಡಿ ಮಹಜರು ಮಾಡಿ ವಶಪಡಿಸಿಕೊಂಡಿರುತ್ತಾರೆ.

ಬಾಂಡನ್ನು ಸಹ ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಮೊದಲು ಪ್ರಹ್ಲಾದ್ ಪೂಜಾರಿಯವರನ್ನು ಕರೆದುಕೊಂಡು ಬಂದಿದ್ದರು. ನಂತರ ಅಭಿಷೇಕ್ ಶೆಟ್ಟಿಗಾರ್ ರವರನ್ನು ಕರೆದುಕೊಂಡು ಬಂದಿದ್ದರು. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಮಹಜರು ಸಮಯದಲ್ಲಿ ಪೊಲೀಸರು ಚಿನ್ನದ ಪೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ನಿಪಿ-10 ಮತ್ತು 11 ರ ಸ್ವತ್ತು ಮಹಜರುಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ಸಹಿಗಳನ್ನು ನಿಪಿ-10(ಸಿ) ಮತ್ತು ನಿಪಿ-11(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಪೋಟೋಗಳನ್ನು ಹಾಜರುಪಡಿಸದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**